ಮೊರಾರ್ಜಿದೇಸಾಯಿ ವಸತಿ ಶಾಲೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 427(690)

ಸದಸ್ಯರ ಹೆಸರು : ಶ್ರೀ ಬಿ.ಆರ್.ನೀಲಕಂಠಪ್ಪ(ತರೀಕೆರೆ)

ಸಚಿವರ ಹೆಸರು ಮತ್ತು ಪದನಾಮ : ಶ್ರೀ ಕಾಗೋಡು ತಿಮ್ಮಪ್ಪ(ಸಮಾಜ ಕಲ್ಯಾಣ ಸಚಿವರು)

ಪ್ರಶ್ನೆ

1) ಇತ್ತೀಚಿನ ಮೂರು ವರ್ಷಗಳಲ್ಲಿ ಎಷ್ಟು ಹಿಂದುಳಿದ ವರ್ಗ ಮತ್ತು ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜಾತಿಗಳ ವಸತಿ ಶಾಲೆಗಳನ್ನು ರಾಜ್ಯದಲ್ಲಿ ಪ್ರಾರಂಭಿಸಲಾಗಿದೆ?

2) ಅದೇ ರೀತಿ ಈ ಮೂರು ವರ್ಷಗಳಲ್ಲಿ ಮೊರಾರ್ಜಿ ವಸತಿ ಶಾಲೆಯನ್ನು ಯಾವ ಯಾವ ಪ್ರದೇಶದಲ್ಲಿ ಪ್ರಾರಂಭಿಸುವ ಬಗ್ಗೆ ಸಮೀಕ್ಷೆ ನಡೆಸಲಾಗಿದೆ ಮತ್ತು ಎಷ್ಟು ಪ್ರಾರಂಭಿಸಲಾಗಿದೆ?

3) ತರಿಕೆರೆ ತಾಲ್ಲೂಕು ಬಾವಿಕೆರೆಯಲ್ಲಿ ಮೊರಾರ್ಜಿ ವಸತಿ ಶಾಲೆಗೆ ಸುಮಾರು 25 ಎಕರೆ ಜಮೀನು ಕಾದಿರಿಸಿರುವುದು ಸರ್ಕಾರದ ಗಮನದಲ್ಲಿದೆಯೇ: ಹಾಗಿದ್ದಲ್ಲಿ, ಅಲ್ಲಿ ವಸತಿ ಶಾಲೆಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಉತ್ತರ

1) ಕಳೆದ 3 ವರ್ಷಗಳಲ್ಲಿ 6 ಪರಿಶಿಷ್ಟ ಜಾತಿಯ 3 ಪರಿಶಿಷ್ಟ ವರ್ಗಗಳ ಮತ್ತು 4 ಅಲ್ಪಸಂಖ್ಯಾತರ ವಸತಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ.

2) ಶಾಲೆಗಳನ್ನು ಪ್ರಾರಂಭಿಸಲು 25 ಸ್ಥಳದಲ್ಲಿ ಸಮೀಕ್ಷೆ ನಡೆಸಿ 13 ಶಾಲೆಗಳನ್ನು ಪ್ರಾರಂಭಿಸಲಾಗಿದೆ. ಉಳಿದ 12 ಸ್ಥಳಗಳಲ್ಲಿ 7 ಶಾಲೆಗಳನ್ನು ಪ್ರಾರಂಭಿಸಲು ದಿನಾಂಕ:9/1/2001ರಂದು ಸರ್ಕಾರದ ಆದೇಶ ನೀಡಿದೆ. ಉಳಿದ 5 ಶಾಲೆಗಳ ಸಮೀಕ್ಷೆ ನಡೆಸಿದ್ದು, ಶಾಲೆಗಳನ್ನು ಪ್ರಾರಂಭಿಸಲು ಇನ್ನೂ ತೀರ್ಮಾನವಾಗಬೇಕಾಗಿದೆ.

3) ತರೀಕೆರೆ ತಾಲ್ಲೂಕಿನಲ್ಲಿ ಕನಿಷ್ಟ 20 ಎಕರೆ ಜಮೀನು ದೊರೆಯುವ ಬಗ್ಗೆ ತರೀಕೆರೆ ತಹಶೀಲ್ದಾರ್ ಹಾಗೂ ಉಪ ವಿಭಾಗಾಧಿಕಾರಿಗಳಿಂದ ಮಾಹಿತಿ ಕೋರಲಾಗಿದೆ. ಬಾವಿಕೆರೆಯಲ್ಲಿ ಇನ್ನೂ ವಸತಿ ಶಾಲೆಯನ್ನು ಮಂಜೂರು ಮಾಡಿರುವುದಿಲ್ಲ.